# ಪ್ರಶ್ನೆ ಪತ್ರಿಕೆಯ ವಿನ್ಯಾಸ

## ವಿಷಯ : ಕನ್ನಡ ತೃತೀಯ ಭಾಷೆ

**ಗರಿಷ್ಠ ಅಂಕಗಳು : 80** **ಅವಧಿ : 2-30 ಗಂಟೆಗಳು**

**ಪ್ರಶ್ನೆ ಪತ್ರಿಕೆ ಅಂಕವಿತರಣೆ:** ಗದ್ಯ-25, ಪದ್ಯ-24, ಪಠ್ಯಪೋಷಕ ಅಧ್ಯಯನ-04, ವ್ಯಾಕರಣ-12, ಗಾದೆ-03 ವಾಕ್ಯರಚನೆ-23, ಅಪಠಿತ ಗದ್ಯ-4 = **ಒಟ್ಟು : 80.**

**ವಿಷಯಾನುಸಾರ ಪ್ರಾಮುಖ್ಯತೆ :**

| **ವಿಷಯ/ ಉಪಘಟಕ** | **ಪ್ರತಿಶತ** | **ದತ್ತ ಅಂಕಗಳು** |
|---|---|---|
| ಗದ್ಯ | 31 | 25 |
| ಪದ್ಯ | 30 | 24 |
| ಪಠ್ಯ ಪೋಷಕ ಅಧ್ಯಯನ | 05 | 04 |
| ವ್ಯಾಕರಣ | 15 | 12 |
| ವಾಕ್ಯ ರಚನೆ | 14 | 11 |
| ಅಪಠಿತಗದ್ಯ | 05 | 04 |
| **ಒಟ್ಟು** | **100** | **80** |

**ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :**

| | | |
|---|---|---|
| ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 12 ಪ್ರಶ್ನೆಗಳು | 12X1 = 12 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 14 ಪ್ರಶ್ನೆಗಳು | 14X1 = 14 |
| 3-4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 10 ಪ್ರಶ್ನೆಗಳು | 10X2 = 20 |
| 5-6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 6 ಪ್ರಶ್ನೆಗಳು | 6 X3 = 18 |
| 5-6 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 X4 = 08 |
| ಪ್ರಬಂಧ & ವಿಸ್ತಾರವಾಗಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 X4 = 08 |
| **ಒಟ್ಟು** | **46 ಪ್ರಶ್ನೆಗಳು** | **80 ಅಂಕಗಳು** |

**ಪಠ್ಯ ವಿಷಯಾನುಸಾರ ವಿತರಣೆ**

| **ಪ್ರಶ್ನೆಗಳ ಸ್ವರೂಪ** | **ಗದ್ಯ** | **ಪದ್ಯ** | **ಪೋಷಕ ಅಧ್ಯಯನ** | **ವ್ಯಾಕರಣ** | **ವಾಕ್ಯರಚನೆ** | **ಅಪಠಿತಗದ್ಯ** | **ಒಟ್ಟು** |
|---|---|---|---|---|---|---|---|
| ಬಹು ಆಯ್ಕೆ | | | | 12 | | | 12 |
| ಅಪಠಿತ ಗದ್ಯ | | | | | | 04 | 04 |
| ಒಂದು ವಾಕ್ಯದ ಉತ್ತರಗಳು | 05 | 03 | 02 | | | | 10 |
| ಮೂರು ನಾಲ್ಕು ವಾಕ್ಯಗಳ ಉತ್ತರಗಳು | 10 | 08 | 02 | | | | 20 |
| ಐದಾರು ವಾಕ್ಯಗಳ ಉತ್ತರಗಳು - ಸಂದರ್ಭಗಳು | 03 | 03 | | | | | 06 |
| ಕವಿ ಕೃತಿ ವಿಚಾರ | 03 | 03 | | | | | 06 |
| ಗಾದೆಗಳು | | | | | 03 | | 03 |
| ಕಂಠಪಾಠ | | 03 | | | | | 03 |
| ಎಂಟು/ಹತ್ತು ವಾಕ್ಯಗಳ ಉತ್ತರಗಳು | 04 | 04 | | | | | 08 |
| ಪತ್ರ | | | | | 04 | | 04 |
| ಪ್ರಬಂಧ | | | | | 04 | | 04 |
| **ಒಟ್ಟು** | **25** | **24** | **04** | **12** | **11** | **04** | **80** |

| | ಗದ್ಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಲಾಕಪ್ಪಿನಲ್ಲಿ ಒಂದು ರಾತ್ರಿ | 4 | 1 |
| 2 | ಕರ್ನಾಟಕ (ತ್ವ) | 3 | 1 |
| 3 | ಅನಿಲ್ ಕುಂಬ್ಳೆ | 4 | 2 |
| 4 | ಧ್ವಜ ರಕ್ಷಣೆ (ನಾ) | 5 | 3 |
| 5 | ವೀರವನಿತೆಯರ | 5 | 3 |
| 6 | ನಾ.ಕಸ್ತೂರಿ | 4 | 3 |
| | **ಒಟ್ಟು** | **25** | **13** |
| | **ಪದ್ಯ** | | |
| 1 | ಕೋಗಿಲೆ | 4 | 2 |
| 2 | ಭೂತಾಯಕುಡಿ | 4 | 2 |
| 3 | ಮಾಯಾದೀಪ | 4 | 2 |
| 4 | ವಚನ | 4 | 2 |
| 5 | ದಾಸರ ಪದ | 4 | 2 |
| 6 | ಜಾನಪದ | 4 | 1 |
| | **ಒಟ್ಟು** | **24** | **11** |
| | **ಪೋಷಕ ಅಧ್ಯಯನ** | | |
| | ಹೀಗೊಂದು ಟಾಪ್‌ಪ್ರಯಾಣ | 2 | 1 |
| | ಸೋಮೇಶ್ವರ ಶತಕ | 1 | 1 |
| | ಮಹಾಶಿಲ್ಪಿ | 1 | 1 |
| | **ಒಟ್ಟು** | **4** | **3** |
| | ಅಪಠಿತ ಗದ್ಯ | 4 | 4 |
| | ವ್ಯಾಕರಣ | 12 | 12 |
| | ಗಾದೆ | 3 | 1 |
| | ಪತ್ರ | 4 | 1 |
| | ಪ್ರಬಂಧ | 4 | 1 |
| | **ಒಟ್ಟು** | **27** | **19** |
| | **ಸಮಗ್ರ ಒಟ್ಟು** | **80** | **46** |

# ಹತ್ತನೇ ತರಗತಿ ಮಾದರಿ ಪ್ರಶ್ನೆ ಪತ್ರಿಕೆ (2)
# ಕನ್ನಡ ತೃತೀಯ ಭಾಷೆ
# ಪ್ರಶ್ನೆ ಪತ್ರಿಕೆ

**ಗರಿಷ್ಠ ಅಂಕ : ೮೦** **ಅವಧಿ : 2-30 ಗಂಟೆಗಳು**

**ಸೂಚನೆಗಳು :**

- ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
- ವಿಭಾಗ 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 53 ಅಂಕಗಳು
- ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು 12 ಅಂಕಗಳು
- ವಿಭಾಗ 'ಸಿ' ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ 15 ಅಂಕಗಳು
- ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಬೇಕು
- ವಸ್ತುನಿಷ್ಠ ಪ್ರಶ್ನೆಗಳಿಗೆ, ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
- ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

## ಭಾಗ – 'ಎ'

## ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 53 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದ ಉತ್ತರವನ್ನು ಬರೆಯಿರಿ.** 10X1=10

1. ಅನಿಲ್ ಕುಂಬ್ಳೆಯವರು ಕ್ರಿಕೆಟ್ ಕಲಿತ ಸಂಸ್ಥೆಯಾವುದು?
2. ರಾಮಸಿಂಗ್‌ನ ತಾಯಿಯ ಹೆಸರನ್ನು ತಿಳಿಸಿರಿ.
3. ಪದಗಳ ಅರ್ಥವನ್ನು ತಿರುಚಿ ನಾನಾರ್ಥ ಹೊರಡಿಸಲು ಪ್ರಯತ್ನಿಸಿದ ಇಬ್ಬರು ಕನ್ನಡ ಸಾಹಿತಿಗಳ ಹೆಸರನ್ನು ತಿಳಿಸಿರಿ.
4. ಆಶುನಾಟಕಗಳೆಂದರೇನು?
5. 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ತಿಳಿಸಿರುವ ರಸ ಕವಿತ್ವವನ್ನು ಹೊಮ್ಮಿಸುವ ಛಂದೋ ಪ್ರಕಾರಗಳನ್ನು ಹೆಸರಿಸಿ?
6. ಪರಮಾತ್ಮನನ್ನು ಹೇಗೆ ಕಾಣಬೇಕೆಂದು ಪುರಂದರದಾಸರು ಹೇಳಿದ್ದಾರೆ?
7. ಉಣ್ಣುವ ಮತ್ತು ಇಡುವ ಚಿಂತೆಯಾರಿಗೆಂದು ಅಂಬಿಗರ ಚೌಡಯ್ಯನವರು ತಿಳಿಸಿದ್ದಾರೆ?
8. ಅನಿಲ್ ಕುಂಬ್ಳೆಯವರು ಯಾವ ತಂಡದ ವಿರುದ್ಧ ಟೆಸ್ಟ್‌ನಲ್ಲಿ ಶತಕ ಗಳಿಸಿ ಔಟಾಗದೆ ಉಳಿದರು?
9. ಪುಲಿಗೆರೆ ಸೋಮನಾಥನ ತಿಳಿಸಿರುವಂತೆ ಶಿಷ್ಟನಲ್ಲದವನು ಯಾರು?
10. ಹೊಟ್ಟೆಕಿಚ್ಚಿನ ಶಿಲ್ಪಿಗಳು ಧರ್ಮಪದನಿಗೆ ಏನು ಮಾಡಲು ಪ್ರಯತ್ನಿಸಿದರು?

**ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು, ಮೂರು ವಾಕ್ಯಗಳ ಉತ್ತರಗಳನ್ನು ಬರೆಯಿರಿ.** 10X2=20

11. ಅನಿಲ್ ಕುಂಬ್ಳೆ ಅವರ ಬಾಲ್ಯ ಜೀವನವನ್ನು ತಿಳಿಸಿರಿ.
12. ರಾಮಸಿಂಗನಿಗೂ, ಕುಲಕರ್ಣಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

13. ರಾಮಸಿಂಗ್ ಹಿಡಿದಿದ್ದ ಧ್ವಜ, ಫೌಜುದಾರನ ಪಿಸ್ತೂಲು ಇವುಗಳಲ್ಲಿ ಯಾವುದು ಶ್ರೇಷ್ಠವಾದುದು? ಏಕೆ?

14. ಪಿತ್ರೋ ಯಾರು? ಆತನು ರಾಣಿ ಅಬ್ಬಕ್ಕನನ್ನು ಏನೆಂದು ಶ್ಲಾಘಿಸಿದ್ದಾನೆ?

15. ಕಸ್ತೂರಿಯವರು ಸ್ನೇಹಿತರೆದುರಿಗೆ ತಮ್ಮ ಸಂಕಟವನ್ನು ತೋಡಿಕೊಂಡ ಪ್ರಸಂಗವನ್ನು ತಿಳಿಸಿರಿ.

16. ಅಕ್ಷರವು, ಹೊಸ ಜೀವನ ಮತ್ತು ಹೊಸ ರೂಪವನ್ನು ಹೇಗೆ ಕೊಡುತ್ತದೆಂದು ಲಕ್ಷ್ಮಣರಾಯರು ತಿಳಿಸಿದ್ದಾರೆ?

17. 'ಮಾಯಾದೀಪ' ಪದ್ಯದಲ್ಲಿ ವ್ಯಕ್ತವಾಗಿರುವಂತೆ ಮನುಷ್ಯನು ಹೊಸ ಮನುಷ್ಯನಾಗುವುದು ಹೇಗೆ?

18. ಕೋಗಿಲೆಯ ಗಾನದ ಅಲೆಗಳ ಪರಿಣಾಮವನ್ನು ಚೆನ್ನವೀರ ಕಣವಿಯವರು ಹೇಗೆ ವರ್ಣಿಸಿದ್ದಾರೆ?

19. ಕವಿಯು 'ಕೋಗಿಲೆ'ಯನ್ನು ಏನೆಂದು ಬೇಡಿದ್ದಾರೆ?

20. ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಲೇಖಕರಿಗೆ ತಮ್ಮನ್ನು ಕಂಡು ಕೆಲವರು ಒಳಗೊಳಗೇ ನಕ್ಕಂತೆ ಭಾಸವಾಯಿತು ಏಕೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಾಕ್ಯಗಳಲ್ಲಿ ಬರೆಯಿರಿ.** **2X3=6**

21. "ಕೇಡಾದರೆ ಮರಣದ ಚಿಂತೆ"

22. "ಬಳೆ ಮುತ್ತೈದೆಯ ಲಕ್ಷಣ"

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ವಾಕ್ಯಗಳಲ್ಲಿ ಬರೆಯಿರಿ.** **2X3=6**

23. ವಿಜಯಲಕ್ಷ್ಮಿ ಬಾಳೇಕುಂದ್ರಿ

24. ಪುರಂದರ ದಾಸರು.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಮಾಡಿರಿ.** **1X3=3**

25. ನಾವು______________
____________ಒಂದೆ___
ಭೂಮಿ_____________
______________ಇಂದೆ

**ಅಥವಾ**

ಕರ್ನಾಟಕ___________
_________________
_____________ಪಡು__
________________ಒಂದೆ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳ ಉತ್ತರಗಳನ್ನು ಬರೆಯಿರಿ.** **2X4=8**

26. ಮಿನಿಪೋಲೀಸ್ ನಗರದಲ್ಲಿ ಗೊರೂರರಿಗೆ ಆದ ಅನುಭವವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

**ಅಥವಾ**

ಗೊರೂರರು ಅಮೇರಿಕಾದಲ್ಲಿ ರಾತ್ರಿವೇಳೆ ದಾರಿ ತಪ್ಪಿಸಿಕೊಂಡು ಪೇಚಿಗೆ ಸಿಲುಕಿದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

27. ಜನಪದರು ಮಳೆರಾಯನನ್ನು ಪ್ರಾರ್ಥಿಸುವ ಪರಿಯನ್ನು ವರ್ಣಿಸಿರಿ.

**ಅಥವಾ**

ಮಳೆಯಿಂದಲೇ ಜಗತ್ತಿನ ಸುಖ ಸಮೃದ್ಧಿ ಎಂಬ ಭಾವನೆ 'ಜಾನಪದ' ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ ವರ್ಣಿಸಿರಿ.

# ಭಾಗ – 'ಬಿ'

## ಅನ್ವಯಿಕ ವ್ಯಾಕರಣ – 12 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಕೆಳಗೆ ಕೊಟ್ಟಿರುವ ನಾಲ್ಕು ಪರ್ಯಾಯಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**

**12X1=12**

28. **ಒಂದು ವ್ಯಂಜನಕ್ಕೆ ಸ್ವರಸೇರಿ ಆಗುವ ಅಕ್ಷರವನ್ನು ಹೀಗೆನ್ನುತ್ತಾರೆ:**

(ಎ) ಸಂಯುಕ್ತಾಕ್ಷರ (ಸಿ) ಗುಣಿತಾಕ್ಷರ

(ಬಿ) ಒತ್ತಕ್ಷರ (ಡಿ) ಸಂಧ್ಯಾಕ್ಷರ

29. **'ಒರೆಗಲ್ಲು' ಪದವು ಈ ಸಂಧಿಗೆ ಉದಾಹರಣೆಯಾಗಿದೆ :**

(ಎ) ಲೋಪ (ಸಿ) ಆಗಮ

(ಬಿ) ಆದೇಶ (ಡಿ) ಜಸ್ತ್ವ

30. **ವಿಜ್ಞಾನಿಗಳ ಹಲವು ಸಂಶೋಧನೆಗಳಿಂದ ದೇಶದ ಪ್ರಗತಿಯಾಗುತ್ತದೆ.–ಈ ವಾಕ್ಯದಲ್ಲಿರುವ ಅನ್ವರ್ಥನಾಮ ಪದ :**

(ಎ) ವಿಜ್ಞಾನಿ (ಸಿ) ಹಲವು

(ಬಿ) ಸಂಶೋಧನೆ (ಡಿ) ದೇಶ

31. **ಈ ಕೆಳಗಿನವುಗಳಲ್ಲಿ ಜೋಡುನುಡಿಗೆ ಉದಾಹರಣೆ ಎಂದರೆ :**

(ಎ) ಕಟಕಟ (ಸಿ) ಕಾಲಿಗೆ ಬುದ್ಧಿಹೇಳು

(ಬಿ) ಕಟ್ಟಕಡೆ (ಡಿ) ಕಪ್ಪಕಾಣಿಕೆ

32. **ಕನ್ನಡ ಮತ್ತು ಸಂಸ್ಕೃತ ಪದಗಳು ಸೇರಿ ಆಗುವ ಸಮಾಸ ಯಾವುದು?:**

(ಎ) ಕ್ರಿಯಾ (ಸಿ) ಅಂಶಿ

(ಬಿ) ಅರಿ (ಡಿ) ದ್ವಿಗು

33. **ಅಲಂಕಾರ ವಾಕ್ಯದಲ್ಲಿ ವರ್ಣಿಸುವ ವಸ್ತುವನ್ನು ಹೀಗೆನ್ನುತ್ತಾರೆ :**

(ಎ) ಉಪಮಾನ (ಸಿ) ವಾಚಕ ಪದ

(ಬಿ) ಉಪಮೇಯಾ (ಡಿ) ಸಮಾನ ಧರ್ಮ

34. **'ಅ' – ಯಾವ ವಿಭಕ್ತಿ ಪ್ರತ್ಯಯವಾಗಿದೆ?**

(ಎ) ಪ್ರಥಮಾ (ಸಿ) ಚತುರ್ಥೀ

(ಬಿ) ಷಷ್ಠೀ (ಡಿ) ಸಪ್ತಮೀ

35. **ಕ್ರಿಯೆಯು ನಡೆದು ಹೋಗಿದೆ ಎಂದು ತಿಳಿಸುವ ಕ್ರಿಯಾಪದ ರೂಪ :**

(ಎ) ಭೂತಕಾಲ (ಸಿ) ವಿಧ್ಯರ್ಥಕ

(ಬಿ) ವರ್ತಮಾನ (ಡಿ) ಭವಿಷ್ಯತ್ ಕಾಲ

36. **ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ :**

(ಎ) ಸಾಮಾನ್ಯ (ಸಿ) ಸರಳ

(ಬಿ) ಮಿಶ್ರ (ಡಿ) ಸಂಯೋಜಿತ

37. **ನೋಟ್ಸ್ ಮರಳಿ ಬಂದುದಕ್ಕೆ ಕಾರಣಗೊತ್ತೇ– ಈ ವಾಕ್ಯದ ಕಡೆಯಲ್ಲಿ ಇರಬೇಕಾದ ಲೇಖನ ಚಿಹ್ನೆ :**

(ಎ) ಪೂರ್ಣವಿರಾಮ (ಸಿ) ಪ್ರಶ್ನಾರ್ಥಕ

(ಬಿ) ಅಲ್ಪವಿರಾಮ (ಡಿ) ಉದ್ಧರಣ

38. **ಮನೆಮಠಗಳನ್ನು ಬಿಟ್ಟ ಭಯೋತ್ಪಾದಕರು ಶತ್ರುವಿನ ಗಡಿಯೊಳಗೆ ನುಸುಳಲು ಮತ್ತೆಮತ್ತೆ ಹೊಂಚು ಹಾಕುತ್ತಾರೆ.– ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದ :**

(ಎ) ಮನೆಮಠ (ಸಿ) ಗಡಿಯೊಳಗೆ ನುಸುಳಲು

(ಬಿ) ಹೊಂಚುಹಾಕು (ಡಿ) ಮತ್ತೆಮತ್ತೆ

39. **'ನಾಕ' ಪದದ ವಿರುದ್ಧಾರ್ಥಕ ರೂಪ :**

(ಎ) ಸ್ವರ್ಗ (ಸಿ) ಲೋಕ

(ಬಿ) ಮರ್ತ್ಯ (ಡಿ) ನರಕ

## ಭಾಗ – 'ಸಿ'

### ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ 15 ಅಂಕಗಳು

40. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1X3=3**

- ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.
- ಮಾಡಿದ್ದುಣ್ಣೋ ಮಹರಾಯ.
- ದೇಶ ಸುತ್ತಬೇಕು ಕೋಶ ಓದಬೇಕು.

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4**

ಭೀಷ್ಮರ ಸೇನಾಧಿಪತ್ಯದಲ್ಲಿ ಎಂಟು ದಿನ ಭಯಂಕರ ಯುದ್ಧ ನಡೆಯಿತು. ಭೀಷ್ಮರನ್ನು ಎದುರಿಸಿ ಗೆಲ್ಲುವ ಮಾರ್ಗಕಾಣದೆ ಪಾಂಡವರು ಚಿಂತಾಕ್ರಾಂತರಾದರು. ಎಂಟು ದಿನವಾದರೂ ಭೀಷ್ಮನು ಒಬ್ಬ ಪಾಂಡವನನ್ನೂ ಬಲಿತೆಗೆದುಕೊಳ್ಳಲಿಲ್ಲವಲ್ಲ ಎಂಬ ಆತಂಕ ದುರ್ಯೋಧನನಿಗಾಯಿತು. ಕೋಪದಿಂದ ದುರ್ಯೋಧನನು ಭೀಷ್ಮರನ್ನು ನನಗಿಂತ ನಿಮಗೆ ಪಾಂಡವರೆಂದರೆ ಹೆಚ್ಚು ಪ್ರೀತಿ ಆದ್ದರಿಂದಲೇ ನೀವು ಅವರಲ್ಲಿ ಒಬ್ಬನನ್ನೂ ಕೊಲ್ಲಲಿಲ್ಲವೆಂದು ಹೀಯಾಳಿಸಿದನು. ತಕ್ಷಣವೇ ಭೀಷ್ಮನು 'ನಾಳೆಯ ಯುದ್ಧದಲ್ಲಿ ನಾನು ಅರ್ಜುನನನ್ನು ಕೊಲ್ಲದಿದ್ದರೆ ನನ್ನ ಸೋಲನ್ನು ಒಪ್ಪಿಕೊಳ್ಳುತ್ತೇನೆಂದು ಪ್ರತಿಜ್ಞೆಮಾಡಿದರು. ಇದರಿಂದ ಕೌರವರಿಗೆ ಅತೀವ ಸಂತೋಷವೂ, ಪಾಂಡವರಿಗೆ ಅತಿಯಾದ ಭಯವೂ ಆಯಿತು. ನಮ್ಮೆಲ್ಲರ ರಕ್ಷಕನಾಗಿ ಭಗವಾನ್ ಶ್ರೀ ಕೃಷ್ಣನಿರುವಾಗ ನಮಗೇಕೆ ಯೋಚನೆ ಎಂದು ಅರ್ಜುನನು ನಿಶ್ಚಿಂತೆಯಿಂದಿದ್ದನು. ಅರ್ಜುನನು ತನ್ನ ಮೇಲೆ ಇಟ್ಟಿರುವ ದೃಢವಿಶ್ವಾಸದಿಂದ ಕೃಷ್ಣನು ಸಂತುಷ್ಟನಾದನು.

**ಪ್ರಶ್ನೆಗಳು:**

41. ದುರ್ಯೋಧನನ ಆತಂಕಕ್ಕೆ ಕಾರಣವೇನು?
42. ದುರ್ಯೋಧನನು ಭೀಷ್ಮರನ್ನು ಏನೆಂದು ಹೀಯಾಳಿಸಿದನು?
43. ಕೌರವರಿಗೆ ಅತೀವ ಸಂತೋಷವಾದುದೇಕೆ?
44. ಕೃಷ್ಣನು ಸಂತುಷ್ಟನಾದುದೇಕೆ?

45. ಚಿತ್ರದುರ್ಗದ ಜಯಲಕ್ಷ್ಮೀ ಪುರಂನಲ್ಲಿರುವ ಸರಕಾರಿ ಪ್ರೌಢಶಾಲೆಯ ಹತ್ತನೇ ತರಗತಿಯಲ್ಲಿ ಓದುತ್ತಿರುವ ನೀವು ಚಿದಾನಂದ/ ಚಿನ್ಮಯಿ ಎಂದು ಭಾವಿಸಿ ಚಿತ್ರದುರ್ಗದ ಕೋಟೆಯನ್ನು ನೋಡಲು ಬರುವಂತೆ ಮಂಗಳೂರಿ ಹಂಪನ ಕಟ್ಟೆಯಲ್ಲಿ ವಾಸವಾಗಿರುವ ನಿಮ್ಮ ಗೆಳೆಯ/ಗೆಳತಿ ವಿನಯಾನಂದ/ಶುಭಶ್ರೀಗೆ ಪತ್ರ ಬರೆಯಿರಿ. **1X4=4**

**ಅಥವಾ**

ಜಮಖಂಡಿಯ ಜಗದ್ಗುರು ವೀರ ಭದ್ರೇಶ್ವರ ಪ್ರೌಢಶಾಲೆಯ ಹತ್ತನೇ ತರಗತಿ 'ಬಿ' ವಿಭಾಗದಲ್ಲಿ ಓದುತ್ತಿರುವ ನೀನು ಗಂಗವ್ವ / ಹಿರೇಮಠ್ ಎಂದು ಭಾವಿಸಿ, ಸೂಕ್ತ ಕಾರಣ ತಿಳಿಸಿ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ರಜಾ ಚೀಟಿಯನ್ನು ಬರೆಯಿರಿ.

46. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** **1X4=4**

- ಭಯೋತ್ಪಾದನೆ.
- ಮಕ್ಕಳ ಶೋಷಣೆ.
- ಸಂಪರ್ಕ ಮಾಧ್ಯಮಗಳು.

*************************